ಸಿಸಿನಂ. 182/2023

ಪಿಡಬ್ಲ್ಯೂ: 2

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,</u>

<u>ಕುಮಟಾ.</u>

ಸಿಸಿ ನಂ. 182/2023

ಪಿಡಬ್ಲೂ : 2

| | | |
|---|---|---|
| ಹೆಸರು | : | ಶ್ರೀ ನಾರಾಯಣ |
| ತಂದೆಯ ಹೆಸರು | : | ಗೋವಿಂದ ಗೌಡಾ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಎ ಎಸ್ ಐ |
| ವಾಸ್ತವ್ಯ | : | ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 05-10-2024 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**<u>ಮುಖ್ಯ ವಿಚಾರಣೆ : ದಂಡ ಪ್ರಕ್ರೀಯೆ ಸಂಹಿತೆ ಕಲಂ 299 ರಡಿಯಲ್ಲಿ ಪಿರ್ಯಾದುದಾರರ ಪರವಾಗಿ:</u> ಶ್ರೀ <u>ಪಿ ಜಿ ಪಿ ವಕೀಲರಿಂದ:</u>**

ನಾನು ಜೂನ 2022 ರಿಂದ ಮೇ 2023 ರವರೆಗೆ ಕುಮಟಾ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ದಿಃ 10-02-2023 ರಂದು ಉದ್ಘೋಷಣೆಯನ್ನು ಮಾಡಲು ನಾನು ಆರೋಪಿ ವಾಸವಾಗಿರುವ ಮನೆ ಹೊನ್ನಾವರ ತಾಲೂಕಿನ ಮಾಡಗೇರಿಗೆ ಪಂಚರೊಂದಿಗೆ ಹೋದಾಗ ಅಲ್ಲಿ ಆರೋಪಿ ಇರಲಿಲ್ಲ . ಅಲ್ಲಿನ ಜನರಿಗೆ ವಿಷಯ ತಿಳಿಸಿ ಉದ್ಘೋಷಣೆಯ ಪ್ರತಿಯನ್ನು ಆರೋಪಿಯ ಮನೆಯ ಜನರಿಗೆ ಕಾಣುವ ರೀತಿಯಲ್ಲಿ ಎದುರುಗಡೆಯ ಗೋಡೆಗೆ ಅಂಟಿಸಿರುತ್ತೇವೆ. ನಂತರ ಅಲ್ಲಿಂದ ಉದ್ಘೋಷಣೆಯನ್ನು ಹೊನ್ನಾವರ ಬಸ್ ನಿಲ್ದಾಣ ಹಾಗೂ ಹೊನ್ನಾವರ ತಹಶೀಲ್ದಾರ ಕಚೇರಿಯ ನೋಟಿಸ್ ಬೋರ್ಡ ಮೇಲೆ ಸಾರ್ವಜನಿಕರಿಗೆ ಕಾಣುವಂತೆ ಅಂಟಿಸಿರುತ್ತೇನೆ . ಅದೇ ದಿನ ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 13-00 ಗಂಟೆಯವರೆಗೆ ಪಂಚರ

ಸಮಕ್ಷಮ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಈ ಬಗ್ಗೆ ವರದಿಯನ್ನು ಬರೆದು ನಮ್ಮ ಠಾಣೆಗೆ ನೀಡಿರುತ್ತೇವೆ . ಸದರಿ ಪಂಚನಾಮೆಯನ್ನು ಹಾಗೂ ವರದಿಯನ್ನು ನೋಡಿದರೆ ಗುರುತಿಸುತ್ತೇನೆ . ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ -8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪಂಚರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -8(ಬಿ) ಹಾಗೂ (ಸಿ} ಎಂದು ಗುರುತಿಸಲಾಯಿತು . ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ -9 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.